ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.
ದಿನಾಂಕ: 09-01-2017.

ಸಂ: ಕಾಶಿಇ/ಶೈವಿ/178/ವಿವೇಕ ಜ.ದಿ/2016-17

# ಸುತ್ತೋಲೆ

ವಿಷಯ: ಸ್ವಾಮಿ ವಿವೇಕಾನಂದರ 154ನೇ ಜನ್ಮದಿನಾಚರಣೆಯ ಅಂಗವಾಗಿ ದಿನಾಂಕ: 12.01.2017 ರಿಂದ 18.01.2017 ರವರೆಗೆ **"ರಾಷ್ಟ್ರೀಯ ಯುವ ಸಪ್ತಾಹ"** ವನ್ನು ಆಚರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 136 ಯುಜಿಹೆಚ್ 2016, ಬೆಂಗಳೂರು. ದಿನಾಂಕ:05.01.2017.

* * * * * * * *

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು, ಕಾಲೇಜು ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಕಾಲೇಜುಗಳಲ್ಲಿ ದಿನಾಂಕ:12.01.2017 ರಿಂದ 18.01.2017 ರವರೆಗೆ ಸ್ವಾಮಿ ವಿವೇಕಾನಂದರ 154ನೇ ಜನ್ಮದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವ ಪ್ರಯುಕ್ತ ಕಳೆದ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳಂತೆ ಈ ಬಾರಿಯೂ ಸಹ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಭಾಷಣ ಹಾಗೂ ಇನ್ನಿತರೆ ಚಟುವಟಿಕೆಗಳನ್ನು ನಡೆಸಿ, ಸ್ವಾಮಿ ವಿವೇಕಾನಂದರ ವಿಚಾರಧಾರೆ ಹಾಗೂ ಧ್ಯೇಯೋದ್ದೇಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ದಿಸೆಯಲ್ಲಿ ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಆದೇಶಿಸಲಾಗಿರುತ್ತದೆ.

ಈ ಸಂಬಂಧ, ಸ್ವಾಮಿ ವಿವೇಕಾನಂದರ 154ನೇ ಜನ್ಮದಿನಾಚರಣೆಯ ಅಂಗವಾಗಿ ಕಳೆದ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳಂತೆ ಇಲಾಖಾ ವ್ಯಾಪ್ತಿಗೊಳಪಡುವ ಎಲ್ಲಾ ಪದವಿ ಕಾಲೇಜುಗಳಲ್ಲಿ ದಿನಾಂಕ:12.01.2017 ರಿಂದ 18.01.2017 **ರವರೆಗೆ** "ರಾಷ್ಟ್ರೀಯ ಯುವ ಸಪ್ತಾಹ" ಕಾರ್ಯಕ್ರಮವನ್ನು ಆಯೋಜಿಸುವುದರ ಮೂಲಕ *(ಯುವ **ಸಪ್ತಾಹ ಕಾರ್ಯಕ್ರಮದ** ಮಾರ್ಗಸೂಚಿಗಳನುಸಾರ)* ರಾಷ್ಟ್ರೀಯತೆ, ದೇಶಭಕ್ತಿ ಹಾಗೂ ಭಾರತೀಯರ ಜೀವನದಲ್ಲಿ ಅದರಲ್ಲೂ ವಿಶೇಷವಾಗಿ ಸ್ವಾಮಿ ವಿವೇಕಾನಂದರ ಗುರಿಯಾಗಿದ್ದ ಯುವ ಜನಾಂಗದಲ್ಲಿ ದೇಶ ಕಟ್ಟುವ, ದೇಶದ ಭವಿಷ್ಯವನ್ನು ಅತ್ಯುಜ್ವಲವಾಗಿ ರೂಪಿಸುವ, ಒಡೆದ ಮನಸ್ಸುಗಳಿಗೆ ಭಾವೈಕ್ಯದ ಬೆಸುಗೆ ಹಾಕುವ ಅದ್ಭುತ ಸಾಮರ್ಥ್ಯ ಇರುವ ಯುವಶಕ್ತಿಗೆ ಸ್ವಾಮಿ ವಿವೇಕಾನಂದರ ತತ್ವ, ಆದರ್ಶ ಹಾಗೂ ಧ್ಯೇಯಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಅರ್ಥಪೂರ್ಣವಾಗಿ ಆಚರಿಸಲು ಸೂಚಿಸಲಾಗಿದೆ.

1) ಜಿಲ್ಲಾ ಮಟ್ಟದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆ ಮತ್ತು ಜಿಲ್ಲಾಧಿಕಾರಿಯವರ ಉಪಾಧ್ಯಕ್ಷತೆಯೊಂದಿಗೆ ಆ ಜಿಲ್ಲೆಯ ಕ್ಷೇತ್ರಕ್ಕೆ ಸಂಬಂಧಪಟ್ಟ ಮಾನ್ಯ ಶಾಸಕರುಗಳು (ಎಂ.ಎಲ್.ಎ. ಮತ್ತು ಎಂ.ಎಲ್.ಸಿ), ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕೇಂದ್ರ ಸ್ಥಾನದಲ್ಲಿನ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರನ್ನೊಳಗೊಂಡ ಸಮಿತಿಯನ್ನು ರಚಿಸುವುದು. ಈ ಸಮಿತಿಯು ಸ್ಥಾನಿಕವಾಗಿ ಲಭ್ಯವಾಗಬಹುದಾದ ಶ್ರೀ ರಾಮಕೃಷ್ಣ ಮಿಷನ್ / ಮಠ ಹಾಗೂ ಸ್ವಾಮಿ ವಿವೇಕಾನಂದರವರ ಆಶ್ರಮಗಳು, ನೆಹರು ಯುವ ಕೇಂದ್ರ, ಸ್ಥಳೀಯ ಸಾಹಿತಿಗಳು ಮತ್ತು ಇತರೆ ಸರ್ಕಾರೇತರ ಸಂಘ ಸಂಸ್ಥೆಗಳನ್ನೂ ಸಹ ತೊಡಗಿಸಿಕೊಂಡು ಸಭೆ ನಡೆಸಿ ನಿಗಧಿಗೊಳಿಸಿದ ಆಯಾ ದಿನದ ಕಾರ್ಯಕ್ರಮವನ್ನು ನಿರ್ವಹಿಸುವುದು.

......2

2) ಇದೇ ರೀತಿ ತಾಲ್ಲೂಕು ಮಟ್ಟದಲ್ಲಿ ಆಯಾ ತಾಲ್ಲೂಕುಗಳ ತಹಶೀಲ್ದಾರ್ ರವರ ನೇತೃತ್ವದಲ್ಲಿ ಸಂಬಂಧಿಸಿದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಎಲ್ಲಾ ಸಂಬಂಧಿಸಿದ ಇಲಾಖೆಗಳ ಅಧಿಕಾರಿ / ನೌಕರರುಗಳನ್ನೊಳಗೊಂಡ ಮತ್ತು ಸ್ಥಾನಿಕವಾಗಿ ಲಭ್ಯವಾಗಬಹುದಾದ ಶ್ರೀ ರಾಮಕೃಷ್ಣ ಮಿಷನ್ / ಮಠ ಹಾಗೂ ಸ್ವಾಮಿ ವಿವೇಕಾನಂದರವರ ಆಶ್ರಮಗಳು, ಸ್ಥಳೀಯ ಸಾಹಿತಿಗಳು ಮತ್ತು ಇತರೆ ಸರ್ಕಾರೇತರ ಸಂಘ ಸಂಸ್ಥೆಗಳನ್ನೂ ಸಹ ತೊಡಗಿಸಿಕೊಂಡು ತಾಲ್ಲೂಕು ಮಟ್ಟದಲ್ಲಿ ಸಭೆ ನಡೆಸಿ ನಿಗಧಿಗೊಳಿಸಿದ ಆಯಾ ದಿನದ ಕಾರ್ಯಕ್ರಮವನ್ನು ನಿರ್ವಹಿಸುವುದು.

3) ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರದಲ್ಲಿನ ಕಾಲೇಜುಗಳ ಪ್ರಾಂಶುಪಾಲರುಗಳು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ರವರ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತಪ್ಪದೇ ಭಾಗವಹಿಸಿ, ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ದಿನಾಂಕ:12.01.2017 ರಿಂದ 18.01.2017 ರವರೆಗೆ ಪ್ರತಿ ದಿನ ರಾಷ್ಟ್ರೀಯ ಯುವ ಸಪ್ತಾಹದ ಕಾರ್ಯಕ್ರಮಗಳ ಮಾರ್ಗಸೂಚಿಗಳನುಸಾರ ಆಯಾ ದಿನಾಂಕಗಳಿಗೆ ನಿಗಧಿಪಡಿಸಿದ ಕಾರ್ಯಕ್ರಮಗಳನ್ನು ನಿರ್ವಹಿಸಿದ ಬಗ್ಗೆ ಇ-ಮೇಲ್ ವಿಳಾಸ **dce.vivekanandajayanti @gmail.com** ಕ್ಕೆ ಕಳುಹಿಸುವಂತೆ ಸೂಚಿಸಲಾಗಿದೆ. ಸದರಿ ಮಾಹಿತಿಯನ್ನು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪರಾಮರ್ಶಿಸುವುದರಿಂದ ತಪ್ಪದೇ ಕಡ್ಡಾಯವಾಗಿ ಮಾಹಿತಿಯನ್ನು ಕಳುಹಿಸುವಂತೆ ಸೂಚಿಸಲಾಗಿದೆ.

4) ಕಾಲೇಜುಗಳ ಮಟ್ಟದಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಸದರಿ ಯುವ ಸಪ್ತಾಹ ಉಪ ಸಮಿತಿಯನ್ನು ರಚಿಸುವಂತೆ, ಈ ಸಮಿತಿಯ ಸಮನ್ವಯಾಧಿಕಾರಿಯ ಹೆಸರು, ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ಇ-ಮೇಲ್ ವಿಳಾಸ **dce.vivekanandajayanti@gmail.com** ಕ್ಕೆ ಕಳುಹಿಸುವಂತೆ ಸೂಚಿಸಲಾಗಿದೆ. ಸದರಿ ಸಮಿತಿಯು ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಕೈಗೊಳ್ಳುವ ನಿರ್ಣಯದಂತೆ ಕಾಲೇಜುಗಳಲ್ಲಿ ಕಾರ್ಯಕ್ರಮಗಳನ್ನು ನಡೆಸುವಂತೆ ಹಾಗೂ ಕಾರ್ಯಕ್ರಮಗಳನ್ನು ನಡೆಸಿದ ಬಗ್ಗೆ ಛಾಯಾಪ್ರತಿಯೊಂದಿಗೆ ವರದಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಅಡಕ: ಸರ್ಕಾರದ ಆದೇಶಗಳು ಮತ್ತು
ಯುವ ಸಪ್ತಾಹ ಕಾರ್ಯಕ್ರಮಗಳ ಪಟ್ಟಿ (ಅನುಬಂಧ)

**ಕಾಲೇಜು ಶಿಕ್ಷಣ ಆಯುಕ್ತರು**

<u>ಇವರಿಗೆ:</u>

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗಾ, ಶಿವಮೊಗ್ಗ, ಮಂಗಳೂರು- ಖಾಸಗಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳು, ಕಾನೂನು ಕಾಲೇಜುಗಳು ಮತ್ತು ಬಿ.ಇಡಿ ಕಾಲೇಜುಗಳಲ್ಲಿಯೂ ಸಹ ಕಾರ್ಯಕ್ರಮವನ್ನು ಯಶಸ್ವಿಯಾಗಿ ತಪ್ಪದೇ, ಕಡ್ಡಾಯವಾಗಿ ಕಾರ್ಯಸೂಚಿಯನುಸಾರ ನಡೆಸಲು ತುರ್ತಾಗಿ ಕ್ರಮ ವಹಿಸುವುದು.
2. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರ ಮೂಲಕ).
3. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.

<u>ಪ್ರತಿಯನ್ನು ಕೃಪಾವಗಾಹನೆಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ:</u>

1) ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
4) ರಾಜ್ಯ ಎಲ್ಲಾ ವಿಶ್ವವಿದ್ಯಾಲಯಗಳ ಉಪಕುಲಪತಿಗಳು.
5) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6) ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
7) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.
8) ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು.
9) ಮಾನ್ಯ ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ ಹಾಗೂ ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
10) ಕಛೇರಿ ಪ್ರತಿ.

# <u>ಅನುಬಂಧ</u>

ಸ್ವಾಮಿ ವಿವೇಕಾನಂದರ 154ನೇ ಜನ್ಮದಿನಾಚರಣೆಯ ಅಂಗವಾಗಿ ದಿನಾಂಕ: 12.01.2017 ರಿಂದ 18.01.2017 ರವರೆಗೆ **"ರಾಷ್ಟ್ರೀಯ ಯುವ ಸಪ್ತಾಹ"** ದ ಆಯಾ ದಿನಾಂಕದ ಕಾರ್ಯಕ್ರಮಗಳು

| ದಿನಾಂಕ | ಕಾರ್ಯಕ್ರಮಗಳು |
|---|---|
| 12ನೇ ಜನವರಿ<br>ರಾಷ್ಟ್ರೀಯ ಯುವ ದಿನ (ಸ್ವಾಮಿ ವಿವೇಕಾನಂದರ ಜಯಂತಿ) | 1) ಸ್ವಾಮಿ ವಿವೇಕಾನಂದರ ತತ್ವಾದರ್ಶಗಳನ್ನು ಯುವ ಜನತೆಯ ಮೇಲೆ ಸ್ಪೂರ್ತಿಯ ಸೆಲೆಯಾಗುವಂತೆ ಮಾಡುವುದು.<br>2) ಯುವ ಕಾರ್ಯಕ್ರಮಗಳ ಮೇಲೆ ಹಾಗೂ ಸ್ವಾಮಿ ವಿವೇಕಾನಂದರ ವಿಚಾರಗಳ ಮೇಲೆ ಚರ್ಚೆ (Debate) – ಕಾಲೇಜು ಮಟ್ಟ, ಅಂತರ್‌ಕಾಲೇಜು ಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ಚರ್ಚಾಸ್ಪರ್ಧೆ.<br>3) ಸ್ವಾಮಿ ವಿವೇಕಾನಂದರ ವಾಣಿಯನ್ನು ಜನರಿಗೆ ತಲುಪಿಸಲು 1.5 ಕಿ.ಮೀ. ರಿಂದ 2.00 ಕಿ.ಮೀ. ಅಂತರದವರೆಗೆ ಜಾಥಾ (walkathon) ನಡೆಸುವುದು.<br>4) ಸಾರ್ವಜನಿಕ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ದಾನ ಮಾಡಿದ ದಾನಿಗಳ ವಿವರಗಳನ್ನೊಳಗೊಂಡ ಬೋರ್ಡ್‌ಗಳನ್ನು ಸಾರ್ವಜಿಕ ಸ್ಥಳಗಳಲ್ಲಿ ಹಾಕುವ ಮುಖಾಂತರ ಇತರರನ್ನು ಪ್ರೇರೇಪಿಸುವುದು.<br>ಉದಾ: ಶಾಲಾ, ಕಾಲೇಜು, ಆಸ್ಪತ್ರೆ, ಭೂಮಿ ದೇವಸ್ಥಾನ ಮುಂತಾದವುಗಳಿಗೆ ತನು, ಮನ, ಧನ ನೀಡಿದ ದಾನಿಗಳು. |
| 13ನೇ ಜನವರಿ<br>ಭಾಗವಹಿಸುವಿಕೆ | 1) ರಾಷ್ಟ್ರೀಯ ಹಾಗೂ ಸಾಮಾಜಿಕ ನೆಲೆಯುಳ್ಳ ಸಾಕ್ಷರತೆ, ಸಮುದಾಯ ಗೀತೆಗಳನ್ನು ಯುವಕರಿಂದ ಹಾಡಿಸುವುದು.<br>2) ಸ್ಥಳೀಯ ಜಾನಪದ ಸಂಸ್ಥೆಗಳ ಕಲಾವಿದರಿಂದ ಬೊಂಬೆ ಪ್ರದರ್ಶನ, ನಾಟಕದಲ್ಲಿ ಯುವಕರನ್ನು ತೊಡಗಿಸುವುದು.<br>3) ಹಳ್ಳಿಗಾಡಿನ ವಿವಿಧ ಕಲೆ-ಕಸೂತಿಗಳ ಹಾಗೂ ವೃತ್ತಿಪರ ಕೌಶಲ್ಯಗಳನ್ನು ಅನಾವರಣಗೊಳಿಸುವುದು.<br>4) ಸಾರ್ವಜನಿಕರಿಂದ ಅನುಪಯುಕ್ತ ಗೊಂಬೆಗಲನ್ನು ಸಂಗ್ರಹಿಸಿ ಅಂಗನವಾಡಿ/ಶಾಲೆಗಳಿಗೆ ನೀಡುವುದು ಮತ್ತು ಪುಸ್ತಕಗಳನ್ನು ಸಂಗ್ರಹಿಸಿ ಶಾಲೆ/ಲೈಬ್ರರಿಗಳಿಗೆ ನೀಡುವುದು. |
| 14 & 15ನೇ ಜನವರಿ | 1) "ಸಾರ್ವತ್ರಿಕ ಸಾಕ್ಷರತೆಯಲ್ಲಿ ಯುವ ಜನತೆಯ ಪಾತ್ರ"ದ ಕುರಿತು ಭಾಷಣ ಸ್ಪರ್ಧೆ<br>2) ರಾಷ್ಟ್ರೀಯ ಮಹತ್ವದ ವಿಷಯಗಳ ಕುರಿತು ಯುವಕರಿಂದ ಕೌಶಲ್ಯಗಳ ಪ್ರದರ್ಶನ<br>3) ದೇಶದಲ್ಲಿ ಶಾಂತಿ ನೆಲೆಸಲು ಸಮಾವೇಶ ಹಾಗೂ ಚರ್ಚೆಗಳು.<br>4) ಸರ್ಕಾರದ ಯುವ ಕಾರ್ಯಕ್ರಮಗಳ ವಿವರಗಳನ್ನು ಯುವ ಜನತೆಗೆ ತಲುಪಿಸುವುದು. |
| 16ನೇ ಜನವರಿ<br>ರಾಷ್ಟ್ರೀಯ ಸೇವಾ ದಿನ | 1) ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರನ್ನು ಒಳಗೊಂಡ ಪರಿಸರ ಸಂರಕ್ಷಣೆ ಕುರಿತಾದ ವಿಶೇಷ ಕಾರ್ಯಕ್ರಮ.<br>2) ಹಳ್ಳಿ/ನಗರಗಳ ಸ್ವಚ್ಛತೆ ಕುರಿತಾಗಿ ಸ್ವಯಂ ಪ್ರೇರಣೆ ಮೇಲೆ ಶ್ರಮದಾನ / ವಿಶೇಷ ಘಟಕ ಕಾರ್ಯಕ್ರಮ.<br>3) ನೇತ್ರದಾನ, ರಕ್ತದಾನ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು<br>4) ನೀರಿನ ಕೊಳ, ರಸ್ತೆ ಕೆಲಸ ಕಾರ್ಯಗಳ ಸಂರಕ್ಷಣೆ ಬಗ್ಗೆ ಯುವ ಜನತೆಯನ್ನು ಬಳಸಿಕೊಳ್ಳುವ ಕಾರ್ಯಕ್ರಮ |
| 17ನೇ ಜನವರಿ<br>ದೈಹಿಕ ದೃಡತೆ / ಕೌಶಲ್ಯ ಅಭಿವೃಧ್ಧಿ | 1) ಗ್ರಾಮೀಣ ಕ್ರೀಡೆ ಹಾಗೂ ವಿಶೇಷ ಕ್ರೀಡೆಗಳಿಗೆ ಪ್ರೋತ್ಸಾಹ.<br>2) ಸಾಹಸ ಕ್ರೀಡೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು<br>3) ಕ್ರೀಡೆಗಳ ಆಯೋಜನೆ<br>4) ಯುವ ಜನರು ತಯಾರಿಸಿದ ಕೌಶಲ್ಯಾಭಿವೃಧ್ಧಿಯ ವಸ್ತುಗಳ ವಸ್ತು ಪ್ರದರ್ಶನ ಏರ್ಪಡಿಸುವುದು.<br>5) ಹೊಸ ವಿಷಯಗಳ ತರಬೇತಿಯನ್ನು ಪ್ರಾರಂಭಿಸುವುದು. |
| 18ನೇ ಜನವರಿ | ದಿನಾಂಕ:18.01.2017 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಕ್ರಮ ಕೈಗೊಳ್ಳುವುದು ಹಾಗೂ ಕಾಲೇಜುಗಳಲ್ಲಿ ಸಮಾರೋಪ ಸಮಾರಂಭವನ್ನು ಆಯೋಜಿಸುವುದು. |

ಸೂಚನೆ: ಮೇಲ್ಕಂಡ ಕಾರ್ಯಕ್ರಮಗಳು ಸೂಚನಾತ್ಮಕವಾಗಿದ್ದು, ಅಂತರ್ ಬದಲಾವಣೆ ಮತ್ತು ದಿನಾಂಕಗಳಲ್ಲಿನ ಕಾರ್ಯಕ್ರಮಗಳನ್ನು ಆಯಾ ಸಂದರ್ಭಾನುಸಾರ ಸಹ ಬದಲಾಯಿಸಲು ಅವಕಾಶವಿದ್ದು, ಸ್ಥಳೀಯವಾಗಿ ಮಹತ್ವವುಳ್ಳ ಯುವ ಸಬಲೀಕರಣಕ್ಕೆ ಸಂಬಂಧಿಸಿದ ಇತರೆ ಸೂಕ್ತ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಬಹುದಾಗಿದೆ.